JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಜಾನಪದ ಮಾಧ್ಯಮದ ಮಹತ್ವ

ಡಾ.ಚಿತ್ತಯ್ಯ ಕೆ
ಕನ್ನಡ ಸಹ ಪ್ರಾಧ್ಯಾಪಕರು
ಸ್ನಾತಕೋತ್ತರ ಅಧ್ಯಯನ ಕೇಂದ್ರ
ಸರ್ಕಾರಿ ಕಲಾ ಕಾಲೇಜು ಸ್ವಾಯತ್ತ
ಚಿತ್ರದುರ್ಗ –577501
emai lChisvr7clk@gmail.com

ಭಾರತ ವಿಶಿಷ್ಟ ಜಾನಪದ ರೂಪಗಳ ಬೀಡು. ಸಾಂಪ್ರದಾಯಿಕ ಸಮಾಜದ ಭೌದ್ಧಿಕ ಅವಶ್ಯಕತೆ ಹಾಗೂ ಬೇಡಿಕೆಗಳನ್ನು ಪೂರೈಸಲು ಪುರಾತನ ಕಾಲದಿಂದಲೂ ಬಹಳ ಯಶಸ್ವಿಯಾಗಿ ಜನಪದ ರೂಪಗಳನ್ನು ಬಳಸಿಕೊಳ್ಳಲಾಗಿದೆ. ಅಭಿವೃದ್ಧಿ ಸಂವಹನದ ಪ್ರಕ್ರಿಯೆಗೆ ಸಾಂಸ್ಕೃತಿಕ ನೆಲೆಗಟ್ಟು ಬೇಕು ಎನ್ನುವುದರ ಅರಿವು, ಜನಪದ ಮಾಧ್ಯಮಗಳಲ್ಲಿ ಆಸಕ್ತಿಯ ಪುನರುಜ್ಜೀವನಗೊಳ್ಳುವುದಕ್ಕೆ ದಾರಿ ಮಾಡಿದೆ. ಹಾಗಾಗಿ ಜನಪದ ಮಧ್ಯಮಗಳ ಪರಿಕಲ್ಪನೆಯು ಒಂದು ಶೈಕ್ಷಣಿಕ ವಿಭಾಗವಾಗಿ ಈಗ ಗುರುತಿಸಲ್ಪಟ್ಟಿದೆ. ಅಕ್ಷರಸ್ಥ, ಅನಕ್ಷರಸ್ಥ ಎಲ್ಲರಿಗು ಇದು ನೀತಿಬೋಧನೆ ಮಾಡುವ ಮಾರ್ಗ ಇದಾಗಿದೆ. ಸಾಂಪ್ರಾದಾಯಿಕ ಮಾಧ್ಯಮಗಳು ಭಿನ್ನರೀತಿಯ ಮಾಧ್ಯಮಗಳು ಸಾಮಾಜಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿರುವಂತಹ ಮಾಹಿತಿಯನ್ನು ಪ್ರಸರಿಸಲು ಬಳಸಲಾಗುವಂತಹ ಇವು ಸಾಂಪ್ರಾಯಿಕ ಸಾಂಸ್ಕತಿಕ , ಗ್ರಾಮೀಣ, ಜನಪದ, ಮೂಲಸ್ತರದ, ಸ್ವದೇಶಿ, ಸ್ಥಳೀಯ ಮಾಧ್ಯಮಗಳೆಂದು ಗುರುತಿಸಿ ಇವುಗಳ ಮೂಲಕ ಜನರಲ್ಲಿ ಜಾಗೃತಿಮೂಡಿಸಿರುವುದನ್ನು ನಾವು ಕಾಣಬಹುದು. ಇದು ನಿನಾಸಂ ರಂಗತರಬೇತಿ ರಂಗಾಯಣಗಳು, ಬೀದಿನಾಟಕಗಳನ್ನು ನಡೆಸಿಕೊಡುತ್ತಿವೆ.

ಚಾರಿತ್ರಿಕವಾಗಿ ಪೂರ್ವ ಪಂಜಾಬಿನ ಪ್ರಸಿದ್ದ ಗ್ರಾಮೀಣ ನಾಟಕ ಸ್ವಾಂಗ್‌ನ ಜನಪ್ರಿಯ ರಚನಾಕಾರರಲ್ಲಿ ಒಬ್ಬನಾದ ದೀಪಚಂದ್, ಜಾನಪದ ನಾಟಕ ತಂಡವನ್ನು ಕಟ್ಟಿಕೊಂಡು ಹರಿಯಾಣದ ಹಲವು ಯುವಕರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರುವಂತೆ ಅವರ ಮನವೊಲಿಸುವಲ್ಲಿ ಯಶಸ್ವಿಯಾದರು ಎಂಬುದನ್ನು ಚರಿತ್ರೆಕಾರರು ದಾಖಲಿಸಿದ್ದಾರೆ. 1940 ರ ದಶಕದಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿಕಾರ್ಯಕ್ರಮಗಳಲ್ಲಿ ಜನರ ಸಹಭಾಗಿತ್ವವನ್ನು ಪ್ರಚೋದಿಸಲು ಭಾರತೀಯ ಕಮ್ಯೂನಿಸ್ಟ್ ಪಕ್ಷದ ಸಾಂಸ್ಕೃತಿಕ ರಂಗವಾದ ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೆಶನ್ ಐಪಿಟಿಎ ಬಂಗಳಾದ ಜಾತ್ರಾ, ಗುಜರಾತಿನ ಭಾವೈ, ಆಂಧ್ರಪ್ರದೇಶದ ಬುರ್ರಕಥಾ ಮುಂತಾದ ಜಾನಪದ ಕಲಾ ರೂಪಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಯಿತು.

**ಬೀದಿನಾಟಕ :** ಜಾನಪದ ಮಾಧ್ಯಮಗಳಲ್ಲಿ ಅತ್ಯಂತ ಪ್ರಭಾವಶಾಲಿಯಾದ ಮಧ್ಯಮವೆಂದರೆ ಬೀದಿನಾಟಕ. 1944ರಲ್ಲಿ ಬಿಜನ್ ಭಟ್ಟಾಚಾರ್ಯ ಅವರಿಂದ ಸ್ಥಾಪಿತವಾದ ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಶನ್ ತನ್ನ ಮೊದಲ ಬೀದಿನಾಟಕ ನಿಬ್ಬನ ವನ್ನು ಪ್ರದರ್ಶಿಸಿತು. ತೀವ್ರವಾದ ಕ್ಷಾಮದ ಭೂಮಿಕೆಯಲ್ಲಿ ಬಂಗಾಳ ಜಮೀನುದಾರರು ಬಡ ರೈತರನ್ನು ಶೋಷಣೆ ಮಾಡುವ ಅಂಶವನ್ನು ಇದು ಬಿಂಬಿಸಿತು, ಭಾರತೀಯ ಜಾನಪದ ಕಲೆಗಳಲ್ಲಿ ಮೂಲಗಳನ್ನು ಹೊಂದಿಲ್ಲವಾದರೂ ಅವುಗಳು ಸ್ಥಳೀಯ ಜಾನಪದ ನಾಟಕಗಳ ರೂಪಗಳನ್ನು ಅಳವಡಿಸಿಕೊಂಡಿದ್ದು ಕುಟುಂಬಯೋಜನೆ, ಏಡ್ಸ್, ವರಕ್ಷಣೆ, ಬಾಲ್ಯವಿವಾಹದ ವಿರುದ್ಧ, ಶೌಚಾಲಯ , ಆರೋಗ್ಯ, ಶಿಕ್ಷಣ, ಪರಿಸರ, ಪೌಷ್ಟಿಕತೆ, ಮಹಿಳಾ ಸಬಲೀಕರಣ ಮತ್ತು ಮೂಲಸ್ತರದ ಪ್ರಜಾಪ್ರಭುತ್ವ ಕುರಿತಾದ ಪರಿಕಲ್ಪನೆಗಳನ್ನು ಪ್ರಸಾರ ಮಾಡುವುದಕ್ಕೆ ಸರ್ಕಾರಿ ಇಲಾಖೆಗಳು ಗ್ರಾಮೀಣ ಮತ್ತು ನಗರಪ್ರದೇಶಗಳಲ್ಲಿ ಬೀದಿನಾಟಕಗಳನ್ನು ಬಳಸಿಕೊಂಡವು. ಅಲ್ಲದೆ ಅಸಮಾನತೆ, ಲಿಂಗಬೇದ, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಪಕ್ಷಪಾತ ಧೋರಣೆ, ಪಿತ್ರಾರ್ಜಿತ, ರೈತರ ಆಸ್ತಿಗೆ ಸಂಬಂಧಿಸಿದ ಹಗೂ ವಿಚ್ಚೇಧನ ಕುರಿ ಕಾನೂನುಗಳ ವಿರುದ್ಧದ ಪ್ರಚಾರದಲ್ಲಿ ಮಹಿಳಾ ಗುಂಪುಗಳು, ಸಂಘ–ಸಂಸ್ಥೆಗಳು ಬೀದಿನಾಟಕಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿವೆ.

**ಬಯಲಾಟ ನಾಟಕ** : ಗ್ರಾಮೀಣ ಪರಿಸರದ ಜನರ ಬದುಕಿನಲ್ಲಿ ಅನ್ನ-ಆಹಾರದಷ್ಟೆ ಮುಖ್ಯವಾದುದು ಜನಪದಕಲೆ. ಕಲೆಗಳ ಗುಣ ಕೇವಲ ಪ್ರದರ್ಶನವಲ್ಲ. ಅವು ಮನುಷ್ಯನನ್ನು ಮನುಷ್ಯರಾಗಿಸುವುದರ ಜತೆಗೆ ಆತ್ಮ ವಿಶ್ವಾಸದ ಸಂಸ್ಕಾರವನ್ನು ಕಲಿಸುತ್ತವೆ. ಸಾಮಾಜಿಕ ಬದುಕಿನ (ವೃತ್ತಿ)ಕೆಲಸ ಮತ್ತು ಕಲೆಗಳಿಗೆ ಒಂದಕ್ಕೊಂದು ಅವಿನಾಭಾವ ಸಂಬಂಧವಿರುತ್ತದೆ. ಜಾತಿ, ವರ್ಣ, ಧರ್ಮ, ತಾರತಮ್ಯ, ಲಿಂಗಭೇದಗಳನ್ನು ಮೀರುವ ಸಮುದಾಯಿಕ ಸಾಮರಸ್ಯದ ಗುಣ ಜನಪದ ಕಲೆಗಳಿಗೆ ಇದೆ. ಆದ್ದರಿಂದ ಈ ಕಲೆಗಳನ್ನು ಗ್ರಾಮೀಣ ಸಂಸ್ಕೃತಿಯ ಜೀವಾಳ ಎಂದು ಕರೆಯಲಾಗಿದೆ. ಹಬ್ಬ-ಹರಿದಿನ, ಜಾತ್ರೆ, ಉತ್ಸವ, ಮೆರವಣಿಗೆ, ತೇರು, ಮದುವೆ ಮತ್ತು ದೇವರ ಆಚರಣೆಗಳಲ್ಲಿ ಹಲವು ಕಲೆಗಳು ಪ್ರದರ್ಶನವಾಗುತ್ತವೆ. ಚಿತ್ರದುರ್ಗದ ಯಲುಸೀಮೆ ಪರಿಸರದಲ್ಲಿ ಬಡುಕಟ್ಟು ಜನರ ಜತೆಗೆ ತಳಸಮುದಾಯಗಳೆ ಹೆಚ್ಚು ವಾಸವಾಗಿವೆ. ನೆಲವನ್ನೇ ನಂಬಿ ಬದುಕುತ್ತಿರುವ ಅಕ್ಷರ ವಂಚಿತರಾಗಿರುವ ಈ ಭಾಗದ ಶ್ರಮಿಕ ಸಮುದಾಯಗಳು ಹಣ, ಅಧಿಕಾರ, ಸನ್ಮಾನ-ಪ್ರಶಸ್ತಿಗಳ ಜಾಡು ಹಿಡಿಯದೆ ಜನಪದ ಬಯಲಾಟ ಮತ್ತು ಸಾಂಸ್ಕೃತಿಕ ಕಲೆಯನ್ನು ದೇವರಂತೆ ಗೌರವಿಸಿಕೊಂಡು ಬರುತ್ತಿವೆ. ಈ ಬಯಲಾಟ ನಾಟಕ ಪ್ರದರ್ಶನಗಳು ಮಾಹಿತಿ, ಮನರಂಜನೆ, ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಪರಿಸರ, ಆರೋಗ್ಯ, ಸಾಮಾಜಿಕ ಪಿಡುಗಳು, ಮಹಿಳಾ ಜಾಗೃತಿ, ಕೃಷಿ ಹೀಗೆ ಸರ್ಕಾರದ ಹಲವು ಯೋಜನೆಗಳ ಪ್ರಚಾರ ಆಂದೋಲವನ್ನು ನಡೆಸುತ್ತಾ ಬರುತ್ತಿವೆ. ನಿರುದ್ಯೋಗ, ಅನೇಕ ಕೈಗಾರಿಕೆಗಳಲ್ಲಿ ಉತ್ಪಾಧಿಸುವ ಹಲವು ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಲು ಬಯಲಾಟ ನಾಟಕಗಳನ್ನು, ಹಾಡು, ಸಂಭಾಷಣೆ ಮೂಲಕ ವ್ಯಾಪಕ ಪ್ರಚಾರ ನಡೆಸಲು ಬಯಲಾಟ ನಾಟಕ ಮತ್ತು ಇನ್ನಿತರ ರಂಗಕಲೆಗಳ ತುಣಕುಗಳನ್ನು ಬಳಸುತ್ತಾರೆ.

**ಹರಿಕಥಾ** : ಹರಿಕಥೆ ಎನ್ನುವುದು ಒಂದು ದಟ್ಟವಾದ ಸಾಂದ್ರವಾದ ಒಂದು ಏಕಪಾತ್ರದಾರಿ ನಾಟಕ. ಇದರಲ್ಲಿ ಒಬ್ಬನೇ ಪಾತ್ರಧಾರಿಯಿ ಹಲವಾರು ಪಾತ್ರಗಳು, ಆಕೃತಿಗಳು , ಮನೋಭಾವಗಳು ಮತ್ತು ವರ್ತನೆಗಳನ್ನು ಅಭಿನಯಿಸುತ್ತವೆ. ಸ್ಪಷ್ಟವಾದ ವಿಷಯ ಗುರಿ ಇರುವ ಕಥೆಗಳು. ಉದಾ : ರಾಮಾಯಣ ಮತ್ತು ಮಹಾಭಾರತದಿಂದ ಆಯ್ದ ನಿರೂಪಣೆಗಳು, ನಾಟಕೀಯತೆ, ಸಂಗೀತ ಮತ್ತು ನೃತ್ಯಗಳೊಂದಿಗೆ ತಾತ್ವಿಕ ಬೋಧನೆಯನ್ನು ಒಳಗೊಂಡಂತಹ ಇದು ಒಂದು ಸಂಯುಕ್ತ ಕಲೆ, ನಟ, ಗಾಯಕ, ವಿವರಣಾಕಾರ ಮತ್ತು ನರ್ತಕ ಈ ಎಲ್ಲಾ ಪಾತ್ರಗಳನ್ನು ಒಬ್ಬ ಹರಿದಾಸ ಮಾಡುತ್ತಾನೆ. ಶ್ರೋತೃಗಳ ಗಮನವನ್ನು ಸೆಳೆದಿಟ್ಟುಕೊಳ್ಳಲು ಆತನ ಸರಳ ನಿರೂಪಣೆಯೊಂದಿಗೆ ಹಾಸ್ಯ ಸಮ್ಮಿಳಿತವಾಗಿರುತ್ತದೆ. ಹರಿಕಥೆಯ ಭಕ್ತಿಪಂಥದ ಉತ್ಪನ್ನವಾಗಿದೆ. ಭಜನೆ ಮತ್ತು ಜ್ಞಾನ ಹಾಗೂ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಆಧ್ಯಾತ್ಮಿಕ ಒಲವು ಮನಃಶಾಂತಿ ಇವುಗಳಿಂದ ಪಡೆದು ನೆಮ್ಮದಿ ಜೀವನ ನಡೆಸುವಲ್ಲಿ ಹಿರಿಯ – ಕಿರಿಯರಿಗೆ ಮಾರ್ಗದರ್ಶನ ಮಾಡುವಲ್ಲಿ ಭಜನೆ, ಪುರಾಣ, ಹರಿಕಥೆಗಳು ಮನುಷ್ಯನಿಗೆ ಜ್ಞಾನಮಾರ್ಗದತ್ತ ಕೊಂಡೊಯ್ಯುತ್ತವೆ. ಅಲ್ಲದೆ ನೀತಿ ಬೋಧನೆಯನ್ನು ಮಾಡುತ್ತವೆ.

**ಜಾನಪದ ಗೀತೆಗಳು** : ಜಾನಪದ ಮಾಧ್ಯಮ ಚಿತ್ತಾಕರ್ಷಕವಾದುದು. ಇದು ಮಾನವನ ಆಲೋಚನೆಗಳು, ಭಾವನೆಗಳು ಮತ್ತು ನಂಬುಗೆಗಳನ್ನು ಅಭಿವ್ಯಕ್ತಿಸಲು ಪೂರಕವಾದ ಸಂವಹನ ಮಾಧ್ಯಮವೇ ಜಾನಪದ ಗೀತೆ. ವ್ಯಕ್ತಿಯ ಹುಟ್ಟಿದಾಗಿನಿಂದ ಹಿಡಿದು ಆಚಾರ-ವಿಚಾರ ಹಾಗೂ ಜೀವನಕ್ರಮ, ತನ್ನ ಬದುಕಿನಲ್ಲಿ ನಡೆದ ಘಟನೆ, ಆಗು ಹೋಗುಗಳು, ಸುಖ-ದುಃಖಗಳು ಪ್ರಭಾವಿತ ವ್ಯಕ್ತಿ, ದೈವ, ಪ್ರಾಣಿ-ಪಕ್ಷಿ, ಸ್ಥಳ, ಮೊದಲಾದುಗಳಿಗೆ ವರ್ಗಾವಣೆಗೊಳ್ಳುತ್ತಾ ಸಂಗೀತದ ಮಜುಲುಗಳಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಹಾಡುಗಳು ಅಥವಾ ಗೀತೆಗಳು ಜನಪ್ರಿಯಗೊಳ್ಳುತ್ತಾ ಹೋಗುತ್ತವೆ. ಐತಿಹಾಸಿಕ, ರಆಜಿಕೀಯ, ಸಆಮಾಜಿಕ ಅಂಶಗಳನ್ನು ಒಳಗೊಂಡು ಹಾಡುವಲ್ಲಿ ಗೇಯತೆ, ಲಯ, ಮಾಧುರ್ಯ ವಿವಿಧ ಮಟ್ಟುಗಳಿಂದ ತುಂಬಿಕೊಂಡು ಮನರಂಜನೆ ನೀಡುತ್ತವೆ. ಇದರಿಂದ ದೈಹಿಕ ಶ್ರಮವನ್ನು ನಿವಾರಿಸಲು ಜಾನಪದ ಗೀತೆ ಅಥವಾ ಹಾಡುಗಳು ಭೂಮಿತಾಯಿಂದ ಮೊದಲುಗೊಂಡು ಪಂಚಭೂತಗಳನ್ನು ನೆನೆಯುತ್ತಾ ತಮ್ಮ ಆರಾಧ್ಯ ದೈವದ ಬಗ್ಗೆ ಕುರಿತಾದ ಹಾಡುಗಳಾಗಿ ಭಕ್ತಿಯನ್ನು ಬಿಂಬಿಸುತ್ತವೆ. ಭಜನೆ ಹಾಡುಗಳು, ವಚನಗಳು, ತತ್ವಪದಗಳು ಇದರಿಂದ ಹೊರತಾಗಿಲ್ಲ ಎನ್ನಬಹುದು. ಯುವಜನತೆ ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿ ಹೋಗುತ್ತಿರುವ ಈ ಹೊತ್ತಿನಲ್ಲಿಯೂ ಹಬ್ಬ, ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಒಮ್ಮೊಮ್ಮೆ ಕಥನಗೀತೆಗಳಾಗಿ ಸಂಜೆಯಿಂದ ಬೆಳಗಾಗುವವರೆಗೂ ಹಾಡುಗಳನ್ನು ಹೇಳುವವರನ್ನು ನಾವು ಇಂದಿಗೂ ಗ್ರಾಮೀಣ ಪರಿಸರದಲ್ಲಿ ಕಾಣಬಹುದು.

**ಜಾತ್ಯತೀತ ನೃತ್ಯಗಳು** : ಕೋಲಾಟ, ಡೊಳ್ಳುಕುಣಿತ, ಮರಗಾಲು ಕುಣಿತ, ಕೀಲುಕುದುರೆ, ಚಿತಮೇಳ, ಸೋಮನಕುಣಿತ, ಆಂಧ್ರದ ಚೆಕ್ಕೆ ಭಜನೆ, ಗುಜರಾತಿನ ದಾಂಡಿಯೂ ಎಲ್ಲಾ ನೃತ್ಯಗಳು, ಕರ್ನಾಟಕ, ಕೇರಳ, ತಮಿಳುನಾಡು ಮುಂತಾದ ಭಾಗಗಳಲ್ಲಿ ನಮ್ಯತೆಯನ್ನು ಮತ್ತು ಬಂಧ ಹಾಗೂ ವಿಷಯ ವಸ್ತುಗಳಲ್ಲಿ ಗತಿಶೀಲತೆಯನ್ನು ಹೊಂದಿರುತ್ತವೆ. ಉದಾ: ಗಾಂದಿಯಿಂದ ಕಾರ್ಗಿಲ್‌ವರೆಗೆ ಅಲ್ಲಿಂದ ಅರಣ್ಯೀಕರಣದವರೆಗೆ ಹೀಗೆ ಹಲವಾರು ವಿಷಯಗಳ ಹರಹನ್ನು ಹೊಂದಿರುವ

ಕೋಲಾಟದ ಹಾಡುಗಳು ಹೊಸ ವಿಷಯಗಳನ್ನು ಹೀರಿಕೊಳ್ಳುವ ಅದರ ಗುಣಕ್ಕೆ ಸಾಕ್ಷಿಯಾಗಿವೆ. ಸಂಪ್ರದಾಯಿಕ ಕಟ್ಟಳೆಗಳೆ, ಮತಧರ್ಮ ಸೀಮೆಗಳಿಂದ ಅತೀತವಾದ ಜಾನಪದ ಗೀತೆಗಳನ್ನು ನರ್ತನ ಮತ್ತು ಹಾಡುವಿಕೆಯ ನಮೂನೆಯಲ್ಲಿ ಇರುವ ಅವುಗಳ ನಮ್ಯತೆಯನ್ನು ಶೋಧಿಸಿ ದೈಹಿಕ ಮತ್ತು ಭೌದ್ಧಿಕ ಶಕ್ತಿಯನ್ನು ಕಸರತ್ತುಗೊಳಿಸಿ ಮನುಷ್ಯ ಕ್ರಿಯಾಶೀಲನಾಗಿರುವಂತೆ ನೃತ್ಯಗಳು ಮಾಡುತ್ತವೆ.

**ಕಥಾ ಗೀತೆಗಳು :** ಯಾವುದಾದರೂ ಜನಪ್ರಿಯವಾದ ಕಥೆಯನ್ನು ನಿರೂಪಿಸುವ ಮತ್ತು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಒಂದು ಸರಳವಾದ, ಚುರುಕಾದ ಪದ್ಯ ಕೇಳುವ ಆಸಕ್ತಿಯ ಇನ್ನಷ್ಟು ಹಿರಿದಾಗಿಸಿ ಜನಪದರು ಕಂಡುಕೊಂಡ ಸರಳ ವಿಧಾನವೇ ಕಥೆ. ಇದು ಒಂದು ಗಟನೆ,, ವಸ್ತು ಮತ್ತು ವಿಷಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನಿರೂಪಿಸುತ್ತದೆ.

**ಗೀಗಿ ಪದಗಳು** : ಉತ್ತರ ಕರ್ನಾಟಕದ ಭಾಗದಲ್ಲಿ ಕಂಡು ಬರುತ್ತವೆ. ಈ ಗೀಗಿಪದಗಳನ್ನು ಜಾನಪದ ಕಥಾ ಗೀತೆಗಳ ರಾಶಿ ಎಂದು ಪರಿಗಣಿಸಲಾಗುತ್ತದೆ. ಅವುಗಳ ಜಾತ್ಯತೀತ ಸ್ವರೂಪದಿಂದಾಗಿ ಚುನಾವಣೆಗಳಿಂದ ಹಿಡಿದು ಜ್ವಲಂತವಾದ ಸಾಮಾಜಿಕ ಸಮಸ್ಯೆಗಳವರೆಗಿನ ಹರವಿನ ಸಂದೇಶಗಳೆಲ್ಲವನ್ನೂ ಇವು ಸಾರುತ್ತಾ ಬಂದಿವೆ.

**ರಂಗ ಭೂಮಿ:** ನಾಟಕವು ಅಭಿಲಾಷಿಗಳಿಗೆ ಪ್ರೇಮವನ್ನು ನೀಡುತ್ತದೆ. ಅಸಭ್ಯ ಮತ್ತು ಅಶಿಕ್ಷಿತನಾದವನಿಗೆ ಎಚ್ಚರಿಕೆ ನೀಡುತ್ತದೆ. ಹೇಡಿಗಳಿಗೆ ದೈರ್ಯ ತುಂಬುತ್ತದೆ. ವೀರರಿಗೆ ಶಕ್ತಿ ತುಂಬುತ್ತದೆ. ಐಶ್ವರ್ಯಪಡೆಯಲು ಉತ್ಸುಕರಾದವರಿಗೆ ಅದನ್ನು ಪಡೆಯಲು ಸೂಚನೆ ನೀಡುತ್ತದೆ. ದುಡಿಮೆ ಬುದ್ಧಿವುಳ್ಳವರಿಗೆ ಜ್ಞಾನವನ್ನು, ರಾಜರಿಗೆ ವೈವಿಧ್ಯತೆಯನ್ನು ಸಂಕಟದಲ್ಲಿರುವವರಿಗೆ ಶಾಂತಿಯನ್ನು ನೀಡುತ್ತದೆ ಎಂದು ಭರತ ತನ್ನ ನಾಟ್ಯಶಾಸ್ತ್ರದಲ್ಲಿ ಹೇಳಿದ್ದಾನೆ. ಇದು ಒಂದು ಸಂಯುಕ್ತ ಕಲೆಯಾಗಿದ್ದು ಕಾಲದಿಂದ ಕಾಲಕ್ಕೆ ಸಮಾಜದಿಂದ ಸಮಾಜಕ್ಕೆ ಸೇವೆ ಸಲ್ಲಿಸುತ್ತಾ ಬಂದಿದೆ. ಜಾನಪದದ ರಂಗ ರೂಪಗಳಾದ ಕರ್ನಾಟಕದ ಯಕ್ಷಗಾನ, ಬಯಲಾಟ, ಸಣ್ಣಾಟ, ದೊಡ್ಡಾಟ, ಕಥಕ್ಕಳಿ, ಕೇರಳ ಭಾಗದ ಭಾಗವತವೇಳ, ಒರಿಸ್ಸಾದ ಕೋಡಿಯಟ್ಟಂ, ಕೇರಳ ತೇರು ಕೊಟ್ಟು, ತಮಿಳುನಾಡು ಜಾತ್ರಾ, ಬಂಗಾಳ ಭಾವೈ, ಗುಜರಾತಿ ಇವು ಪೌರಾಣಿಕ ಕಥಾ ವಸ್ತುಗಳನ್ನು ಹೊಂದಿದ್ದು ಇಂದಿಗೂ ಸಂವಹನ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತಿವೆ.

ಈ ಮಾಧ್ಯಮಗಳು ವೃತ್ತಿಯನ್ನು ಒದಗಿಸಿಕೊಡುವುದಲ್ಲದೆ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸಹಕಾರಿಯಾಗಿವೆ. ಸೃಜನಾತ್ಮಕ ಘಟಕಗಳಾದ ಹಾವ, ಭಾವಗಳು, ಮುಖದ ಅಭಿವ್ಯಕ್ತಿ, ಆಂಗಿಕ ಚಲನೆ, ವೇಷಭೂಷಣ, ಪ್ರಸಾಧನ, ಸಂಗೀತ, ನರ್ತನ ಮತ್ತು ಸಂಭಾಷಣೆಗಳಿಂದ ಪರಿಣಾಮಕಾರಿಯಾದ ಸಂವಹನ ಮಾಧ್ಯಮವಾಗಿ ಹೊರ ಹೊಮ್ಮಿವೆ. ಇದು ವ್ಯಕ್ತಿಯಲ್ಲಿ ಅಂತರ್ಗತವಾಗಿ ಬಿಡುತ್ತದೆ. ಸಾರಥಿ ಅಥವಾ ವಿದೂಷಕನ ಪಾತ್ರವು ತನ್ನನ್ನು ತಾನು ಬಗ್ಗಿಸಿಕೊಂಡು ಆತನ ಆಗಮನವೇ ಪ್ರೇಕ್ಷಕರಿಗೆ ಹಾಸ್ಯ, ವಿನೋದ, ಹೀಗೆ ಜಾನಪದದ ನಾಟಕದ ಎಲ್ಲಾ ಪಾತ್ರಗಳಿಗೂ ವಿದೂಷಕ ಒಬ್ಬ ನಿರಂತರ ಸಂಗಾತಿ ಆತನದು. ಆಶುಮಾತುಗಾರಿಕೆ ಇದಕ್ಕಾಗಿಯೇ ನೋಡುಗರು ಕಾತುರಾಗಿರುತ್ತಾರೆ.

**ಗೊಂಬೆಯಾಟ** : ಗೊಂಬೆಯಾಟದ ಮೂಲಕ ಕಥೆ ಹೇಳುವ, ಕೇಳುವ ಪರಂಪರೆ ಹಲವು ಶತಮಾನಗಳಿಂದ ಬೆಳೆದು ಬಂದಿದೆ. ಗೊಂಬೆಯಾಟ ಅತ್ಯಂತ ಪ್ರಭಾವಶಾಲಿ ಜಾನಪದ ಮಾಧ್ಯಮ. ಪ್ರಪಂಚದಾದ್ಯಂತ ಗೊಂಬೆಗಳನ್ನು ಬಳಸಿಕೊಳ್ಳಲಾಗಿದೆ. ಇದು ಖರ್ಚಿಲ್ಲದೆ ಇರುವಂತದ್ದು ಹಾಗೂ ಮಿತವ್ಯಯಿ, ವೃತ್ತಿಪರವಾದ ಗೊಂಬೆಯಾಟದ ತಂಡಗಳು ಭಾರತದ ರಾಜಸ್ಥಾನ, ಆಂಧ್ರಪ್ರದೇಶ, ಮಹಾರಾಷ್ಟ, ಕೇರಳ ಮತ್ತು ಕರ್ನಾಟಕದಲ್ಲಿಯೂ ಗೊಂಬೆಯಾದ ಪರಂಪರೆ ವರ್ಷ ವರ್ಷಕ್ಕೂ ಸಂಕೀರ್ಣಗೊಳ್ಳುತ್ತಿವೆ. ಈ ಗೊಂಬೆಯಾಟ ಜನಸಮೂಹಗಳಿಗೆ ಮನರಂಜನೆ, ಶಿಕ್ಷಣ, ಮಾಹಿತಿ ನೀಡಲು ಪುರಾಣ ಕಥೆಗಳಿಂದ ಹಿಡಿದು ಸಾಮಾಜಿಕ ವಿವಿಧ ಅಂಶಗಳ ವರೆಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಹಲವು ವಿಷಯಗಳನ್ನು ಪ್ರಸ್ತುತಪಡಿಸುತ್ತವೆ. ಇದು ತುಂಬಾ ಸರಳ. ಆನರಿಗೆ ಸುಲಭವಾಗಿ ಲಭ್ಯವಾಗುತ್ತದೆ. ಪರಸ್ಪರ ಆಂತರಿಕ ಸಂವಹನ ಆಗುವಂತಹದ್ದು . ಪ್ರತಿಕ್ರಿಯೆಯೂ ತಕ್ಷಣವೇ ಆಗುತ್ತದೆ. ರಾಜಕಾರಣಿಗಳು, ಮತಾಂಧತೆ, ಭಾಷಾಂಧತೆಗಳ ಬಗ್ಗೆ ಅಪಹಾಸ್ಯ ಮಾಡಲು ಗೊಂಬೆಯನ್ನು ಬಳಸಿಕೊಳ್ಳಲಾಗುತ್ತದೆ.

ಸರ್ಕಾರಿ ಯೋಜನೆಗಳ ಸೌಲಭ್ಯ, ಪರಿಸರ, ಶಿಕ್ಷಣ, ವರದಕ್ಷಣೆ, ವಿಜ್ಞಾನ, ಕಲೆ, ಮಹಿಳಾ ಜಾಗೃತಿ, ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಉತ್ಪಾಧಿಸಿದ ವಸ್ತುಗಳನ್ನು ಜನ ಕೊಂಡುಕೊಳ್ಳಲು ಜಾಹಿರಾತಿನ ಮೂಲಕ ಜನರು ಮಾರುಕಟ್ಟೆಯಲ್ಲಿ ವಸ್ತುಗಳನ್ನು ಕೊಂಡುಕೊಳ್ಳುವಂತೆ ಅವರನ್ನು ಪ್ರೇರೇಪಿಸಲು ಜಾನಪದ ಮಾಧ್ಯಮಗಳು ಸಮಾಜದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ಪರಾಮರ್ಶನಾ ಗ್ರಂಥಗಳು**

ಜಾನಪದ ಸ್ವರೂಪ ಮತ್ತು ಸಾಹಿತ್ಯ : ಡಿ.ಲಿಂಗಯ್ಯ, ಕೆ.ಆರ್. ಸಂಧ್ಯಾರೆಡ್ಡಿ

ಕರ್ನಾಟಕ ಜನಪದ ಕಾವ್ಯಗಳು : ಡಿ.ಲಿಂಗಯ್ಯ

ಪತ್ರಿಕೋದ್ಯಮ ಮತ್ತು ಜಾನಪದ ಮಾಧ್ಯಮ : ಕ.ರಾ.ಮು.ವಿ ವಿ. ಮೈಸೂರು

ಜಾನಪದ ಕೈಪಿಡಿ : ಕರ್ನಾಟಕ ಜಾನಪದ ಅಕಾಡೆಮಿ

ಜಾನಪದ ಅಧ್ಯಯನ : ತೀನಂ ಶಂಕರನಾರಾಯಣ

ಜಾನಪದ ವಿಷಯ ವಿಶ್ವ ಕೋಶ : ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು